# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 426 |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಲ್ಕೀಸ್ ಬಾನು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಮೋಜಿಣಿ ಇಲಾಖೆಯಡಿ ಪೋಡಿ, ದುರಸ್ತಿ ಮುಂತಾದ ಅರ್ಜಿಗಳು ವರ್ಷಾನುಗಟ್ಟಲೆ ವಿಲೇವಾರಿಯಾಗದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಕುರಿತು ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು) | ಬಂದಿದೆ.<br><br>ಬಾಕಿಯಿರುವ ಪೋಡಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು:-<br><br>1. ಬಾಕಿ ಅರ್ಜಿಗಳ ಶೀಘ್ರ ವಿಲೇವಾರಿ ಕುರಿತು ಇಲಾಖೆಯು ಸನ್ 2023 ರಿಂದ ಒಟ್ಟು 1,234 ಜನ ಹೆಚ್ಚಿನ ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಂಡು, ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡಲಾಗಿದೆ.<br>2. ದರಖಾಸ್ತು ಪೋಡಿ ಕುರಿತಂತೆ ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024ರಡಿ ಸರಳೀಕರಿಸಿ, ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ದುರಸ್ತಿ ಪಡಿಸಲು ಆದೇಶಿಸಿದೆ.<br>3. ದರಖಾಸ್ತು ಪೋಡಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.<br>4. ಸರ್ಕಾರದ ಆದೇಶ ಸಂಖ್ಯೆ:ಕಂಇ 130 ಎಸ್‌ಎಸ್‌ಸಿ 2021 ದಿನಾಂಕ 11-2-2022 & 20-2-2025 ಹಾಗೂ ಭೂಮಾಪನ ಆಯುಕ್ತಾಲಯದ ಸುತ್ತೋಲೆ ಸಂಖ್ಯೆ:SSLR/PMU-13019/22/2025 ದಿನಾಂಕ:24-04-2025ರಡಿ ದರಖಾಸ್ತು ಪೋಡಿ, 11ಇ, ಹದ್ದುಬಸ್ತು ಮುಂತಾದ ಎಲ್ಲಾ ತರಹದ ಅರ್ಜಿಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರನ್ನು ಸಹ ಬಳಸಿಕೊಂಡು ಅಳತೆ ಮಾಡಲು ಆದೇಶಿಸಿದೆ.<br>5. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು |

| | | |
|---|---|---|
| | | ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸ ಲಾಗುತ್ತಿದ್ದು, ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲೇ ಸರದಿ ಸಾಲಿನಂತೆ(FIFO) ನಿರ್ವಹಿಸುವ ಮೂಲಕ ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br>6. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>7. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>8. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣ ಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಇದರಿಂದ ಬಾಕಿಯಿರುವ ಪೋಡಿ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. |
| (ಆ) | ಸರ್ಕಾರದಿಂದ ಮಂಜೂರಾದ ರೈತರ ಜಮೀನಿಗೆ ಮೂರು ನಾಲ್ಕು ದಶಕಗಳಿಂದ ದುರಸ್ತಿ / ಪೋಡಿ / ನಕ್ಷೆ ಕಾರ್ಯ ಪೂರ್ಣ ಗೊಳ್ಳದಿರಲು ಕಾರಣಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ ದುರಸ್ತಿ / ಪೋಡಿ / ನಕ್ಷೆ ಕಾರ್ಯಗಳು ಬಾಕಿ ಇರಲು ಪ್ರಮುಖ ಕಾರಣಗಳು:-<br><br>1. ಆಕಾರಬಂದು & ಪಹಣಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.<br>2. ಪಹಣಿ ಕಾಲಂ 3 & 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿರುವುದು.<br>3. ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗ ದಿರುವುದು.<br>4. ಭೂಮಂಜೂರಿ ಪ್ರಕರಣಗಳಲ್ಲಿ ಸರ್ಕಾರದ ಸೂಚನೆಗಳನ್ವಯ ನಮೂನೆ 1-5 ಭರ್ತಿ ಮಾಡುವಲ್ಲಿ ಪೂರಕ ಮಂಜೂರಿ ದಾಖಲೆ ಲಭ್ಯವಾಗದೇ ಇರುವುದು ಮತ್ತು ಮಂಜೂರಿ & ಅನುಭವದ ವಿಸ್ತೀರ್ಣ ಮತು ಸ್ವಾಧೀನದಲ್ಲಿ ವ್ಯತ್ಯಾಸ ಇತ್ಯಾದಿ. |

| | | |
|---|---|---|
| | | 5. ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು.<br>6. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ವ್ಯಾಜ್ಯಗಳು ಇರುವುದು.<br>7. ಸರ್ಕಾರಿ / ಪರವಾನಗಿ ಭೂಮಾಪಕರಿಗೆ ಪ್ರತಿ ಮಾಹೆ ನಿಗಧಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗುತ್ತಿರುವುದು, |
| (ಇ) | ದುರಸ್ತಿಯಾದ ಅಥವಾ ದುರಸ್ತಿಯಾಗದ ಜಮೀನುಗಳಿಗೆ ಬಂಡಿದಾರಿ ಇಲ್ಲದೇ ರೈತರುಗಳು ತಮ್ಮ ತಮ್ಮ ಜಮೀನುಗಳಿಗೆ ಹೋಗಲು ಹರಸಾಹಸ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಬಂದಿದೆ.<br>ರೈತರ ಜಮೀನುಗಳ ದಾರಿ ಸಮಸ್ಯೆ ಬಗೆಹರಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 23 ಎಲ್ ಜಿಪಿ 2022, ದಿನಾಂಕ: 20.10.2023ರಲ್ಲಿ ಕಾಲುದಾರಿ, ಬಂಡಿದಾರಿ ಸಂಬಂಧ ಕಂದಾಯ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ. |

<u>**ಸಂಖ್ಯೆ: ಕಂಇ 152 ಎಸ್ಎಸ್‌ಸಿ 2025**</u>

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು